**ದಿನಾಂಕ: 12/04/2022ರಂದು** ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ಇವರು ಬೇಲೂರು ಮರಳು ಬ್ಲಾಕ್ (Block No.5) ರಲ್ಲಿ ತುಂಗಭದ್ರಾ ನದಿ ಪಕ್ಕದ ಸ.ನಂ. 145 (P), 148, 149, 151 ಮತ್ತು 152 (P) ಬೇಲೂರು ಗ್ರಾಮ, ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆಯಲ್ಲಿ ಒಟ್ಟು 12.26 ಎಕರೆ (4.96 ಹೆಕ್ಟೇರ್) ಪ್ರದೇಶದಲ್ಲಿ, ವರ್ಷಕ್ಕೆ 60,890 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು **ಉದ್ದೇಶಿಸಿರುವ ಬಗ್ಗೆ ನಡೆದ ಪರಿಸರ ಸಾರ್ವಜನಿಕ ಸಭೆಯ ನಡವಳಿಗಳು**

| | |
|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : ಹಾವೇರಿ ಜಿಲ್ಲೆ, ರಾಣೇಬೆನ್ನೂರು ತಾಲ್ಲೂಕಿನ ಬೇಲೂರು ಮರಳು ಬ್ಲಾಕ್ (Block No.5) ರಲ್ಲಿ ಬೇಲೂರು ಗ್ರಾಮದ ತುಂಗಭದ್ರಾ ನದಿ ಪಕ್ಕದ ಸ.ನಂ145 (P), 148, 149, 151 ಮತ್ತು 152 (P) ರಲ್ಲಿ |
| ದಿನಾಂಕ | : 12/04/2022 |
| ಅಧ್ಯಕ್ಷತೆ | : ಎಸ್. ಬಿ. ಶೆಟ್ಟೆಣ್ಣವರ., ಭಾ.ಆ.ಸೇ. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪರಿಸರ ಸಾರ್ವ ಜನಿಕ ಸಭೆ ಸಮಿತಿ, ಹಾವೇರಿ ಜಿಲ್ಲೆ |
| ಹಾಜರಿದ್ದ ಅಧಿಕಾರಿಗಳ ವಿವರ | : **ಅನುಬಂಧ–1** |
| ಯೋಜನಾದಾರರ ವತಿಯಿಂದ ಹಾಜರಿದ್ದ ಪ್ರತಿನಿಧಿಗಳ ವಿವರ | : **ಅನುಬಂಧ–2** |
| ಭಾಗವಹಿಸಿದ ಸಾರ್ವಜನಿಕರ ವಿವರ | : **ಅನುಬಂಧ–3** |
| ಸಭೆಯಲ್ಲಿ ಪ್ರಸ್ತುತ ಪಡಿಸಲಾದ ಪ್ರಸ್ತಾವನೆಯ ಪ್ರತಿ | : **ಅನುಬಂಧ–4** |
| ಸಾರ್ವಜನಿಕರು ಲಿಖಿತ ರೂಪದಲ್ಲಿ ಸಲ್ಲಿಸಿದ ಅಭಿಪ್ರಾಯಗಳ ಪತ್ರಗಳು | : **ಅನುಬಂಧ–5** |
| ಶ್ರೀ ರವೀಂದ್ರಗೌಡ ಎಫ್ ಪಾಟೀಲರು, ಮಂಡಳಿಯ ಪ್ರಾದೇಶಿಕ ಕಛೇರಿಗೆ ದಿನಾಂಕ: 1/4/2022 ರಂದು ಸಲ್ಲಿಸಿರುವ ಅಹವಾಲು | : **ಅನುಬಂಧ–6** |

**ಪೀಠಿಕೆ:–**

ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ಇವರು ಬೇಲೂರು ಮರಳು ಬ್ಲಾಕ್ (Block No.5) ರಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ತುಂಗಭದ್ರಾ ನದಿ ಪಕ್ಕದ ಸ.ನಂ. 145 (P), 148, 149, 151 ಮತ್ತು 152 (P) ಬೇಲೂರು ಗ್ರಾಮ, ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆಯಲ್ಲಿ ಒಟ್ಟು 12.26 ಎಕರೆ (4.96 ಹೆಕ್ಟೇರ್) ಪ್ರದೇಶದಲ್ಲಿ, ವರ್ಷಕ್ಕೆ 60,890 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ಮಾಡಲು ಉದ್ದೇಶಿಸಿರುತ್ತಾರೆ.

**ಘಟಕದ ಪ್ರತಿನಿಧಿಗಳು ಉದ್ದೇಶಿತ ಯೋಜನೆಯನ್ನು ಪ್ರಸ್ತುತಪಡಿಸಿದ ನಂತರ ಈ ಕೆಳಕಂಡಂತೆ ಸಾರ್ವಜನಿಕರು ತಮ್ಮ ಅಭಿಪ್ರಾಯ ಮತ್ತು ಅನಿಸಿಕೆಗಳನ್ನು ವ್ಯಕ್ತಪಡಿಸಿದರು.**

(1) ಶ್ರೀ ನಿಂಗಪ್ಪ ಸಣ್ಣಕರಿಯಪ್ಪ ಕರಿಡೆಮ್ಮನವರ, ಬೇಲೂರು ಗ್ರಾಮ

ಇವರು ಮಾತನಾಡುತ್ತಾ, ನಮ್ಮೂರಲ್ಲಿ ಅರೆ ಯಂತ್ರೋಪಕರಣ ಬಳಕೆಯಿಂದ ನಮಗೆ ತೊಂದರೆಯಾಗುತ್ತದೆ ನಮ್ಮೂರಲ್ಲಿ ಬಹಳಷ್ಟು ಕೂಲಿ ಕಾರ್ಮಿಕರಿದ್ದು ಅವರಿಗೆ ಕೆಲಸ ಕೊಡಬೇಕೆಂದು ವಿನಂತಿಸಿದರು. ಈ ಯೋಜನೆಯಿಂದ ಬೇಲೂರು ಗ್ರಾಮದ ಅಭಿವೃದ್ಧಿ ಮತ್ತು ಹೆಚ್ಚಿನ ಅನುಕೂಲ ಮಾಡಿಕೊಡಬೇಕೆಂದು ವಿನಂತಿಸಿದರು.

(2) ಶ್ರೀ ರಾಜಪ್ಪ, ಬೇಲೂರು ಗ್ರಾಮ

ಇವರು ಮಾತನಾಡುತ್ತಾ ಅಲ್ಲಲ್ಲಿ ಉಸುಕು ಸಂಗ್ರಹ ಮಾಡುವುದರಿಂದ ನಮ್ಮ ಹೊಲಗಳಿಗೆ ತೊಂದರೆಯಾಗುತ್ತದೆ, 20 ವರ್ಷಗಳಿಂದ ನಾವು ತೊಂದರೆ ಅನುಭವಿಸುತ್ತಿದ್ದು ಅಲ್ಲಲ್ಲಿ ಉಸುಕು ಹಾಕುವುದರಿಂದ ಮತ್ತು ವಾಹನಗಳು ಓಡಾಡುವುದರಿಂದ ಧೂಳಿನಿಂದ ಬೆಳೆಗಳಿಗೆ ಹಾನಿಯಾಗುತ್ತಿದೆ ಎಂದು ಇದಕ್ಕೆ ತಾವು ಪರಿಹಾರ ಸೂಚಿಸಬೇಕೆಂದು ಕೋರುತ್ತೇವೆ ಎಂದು ಕೇಳಿದಾಗ ಮಾನ್ಯ ಜಿಲ್ಲಾಧಿಕಾರಿಗಳು ಸರ್ಕಾರದವರೇ ಮರಳು ಗಣಿಗಾರಿಕೆ ಮಾಡುವುದರಿಂದ ಇನ್ನು ಮುಂದೆ ಹೀಗಾಗುವುದಿಲ್ಲವೆಂದು ಹಾಗೂ ಇದರಿಂದ ತೊಂದರೆಯಾಗುವುದಾದರೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ತಿಳಿಸಲು ಸೂಚಿಸಿದರು ಮತ್ತು ರಸ್ತೆಯನ್ನು ಡಾಂಬರೀಕರಣ ಮಾಡುವುದರಿಂದ ಧೂಳು ಆಗುವುದಿಲ್ಲವೆಂದು ತಿಳಿಸಿದರು.

(3) ಶ್ರೀ ಸಿದ್ದಪ್ಪ ಕುದರಿಹಾಳ, ಬೇಲೂರು ಗ್ರಾಮ

ಇವರು ಮಾತನಾಡುತ್ತಾ, ಈ ಯೋಜನೆ ಉತ್ತಮ ರೀತಿಯಲ್ಲಿದೆ ಆದರೆ ನಮ್ಮ ಕಾರ್ಮಿಕರಿಗೆ ಯಾವುದೇ ಅವಕಾಶ ನೀಡಿರುವುದಿಲ್ಲ ಹಾಗೂ ರೈತರನ್ನು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ. ದಕ್ಷಿಣ ಕನ್ನಡ ವಿಭಾಗದಲ್ಲಿ ನದಿಯಲ್ಲಿ ಮುಳಗಿ ಮರಳನ್ನು ತೆಗೆಯುವ ಪದ್ಧತಿ ಇರುತ್ತದೆ ಎಂದು ಹೇಳಿದಾಗ ಮಾನ್ಯ ಜಿಲ್ಲಾಧಿಕಾರಿಗಳು ಅದು ಕಾನೂನುಬಾಹಿರವಾಗಿದ್ದು ಅದನ್ನು ಮಾಡಲು ಸಾಧ್ಯವಿರುವುದಿಲ್ಲವೆಂದು ತಿಳಿಸಿದರು ಅದಕ್ಕೆ ಸಿದ್ದಪ್ಪನವರು ಅದನ್ನು ಕಾನೂನು ಪ್ರಕಾರವೇ ಅನುಮತಿ ನೀಡಿರುತ್ತಾರೆ 9/11/2021 ರಂದು ಪ್ರಜಾವಾಣಿ ಮತ್ತು ಕನ್ನಡಪ್ರಭ ದಿನಪತ್ರಿಕೆಯಲ್ಲಿ ಬಂದಿರುತ್ತದೆ ಹೀಗಾಗಿ ಇಲ್ಲಿ ಏನೇ ಮಾಡಿದರೂ ನಮ್ಮ ಕಾರ್ಮಿಕರನ್ನೇ ಇಟ್ಟುಕೊಂಡು ಮಾಡಬೇಕು, ಅವರನ್ನು ಬಿಟ್ಟು ಮಾಡಬಾರದೆಂದು ತಿಳಿಸಿದರು ಇದಕ್ಕೆ ಜಿಲ್ಲಾಧಿಕಾರಿಗಳು ಇದನ್ನು ಪರಿಗಣನೆಗೆ ತೆಗೆದುಕೊಳ್ಳಲು ಯೋಜನೆ ಪ್ರತಿನಿಧಿಗಳಿಗೆ ಸೂಚಿಸಿದರು.

(4) ಶ್ರೀ ರವೀಂದ್ರಗೌಡ ಎಫ್ ಪಾಟೀಲ, ಮುಷ್ಠೂರು ಗ್ರಾಮ

ಇವರು ದಿನಾಂಕ: 4/4/2022 ರಂದು ಪ್ರಾದೇಶಿಕ ಕಛೇರಿ, ಹಾವೇರಿಗೆ ಪತ್ರದ ಮೂಲಕ (ಪತ್ರ ಸಂಖ್ಯೆ: ಇಲ್ಲ, ದಿನಾಂಕ: 1/4/2022) ತಕರಾರನ್ನು ಸಲ್ಲಿಸಿದ್ದು ಅದರಲ್ಲಿ ಸದರಿ ಉದ್ದೇಶಿತ ಯೋಜನೆಗೆ ಸಂಬಂಧಿಸಿರದ ಕೆಲವು ವಿಷಯಗಳನ್ನು ಬರೆದು, ಅಂತಿಮವಾಗಿ ಯೋಜನೆಯ ಉದ್ದೇಶಿತ ಸ್ಥಳದಲ್ಲಿ ಸಾರ್ವಜನಿಕರ ಸಭೆ ಕರೆಯಬಾರದು ಆದರೆ ಸಾರ್ವಜನಿಕರ ಸಭೆಯನ್ನು ತಾಲೂಕಾ ಕೇಂದ್ರದಲ್ಲಿ ನಡೆಸಿ, ನಿಯಮಾವಳಿಗಳನ್ನು ಪಾಲಿಸಿ, ಮುಕ್ತ, ಶಾಂತ ವಾತಾವರಣವನ್ನು ನಿರ್ಮಿಸಬೇಕು. ಒಂದು ವೇಳೆ ಈ ತಕರಾರನ್ನು ಗಣನೆಗೆ ತೆಗೆದುಕೊಳ್ಳದಿದ್ದರೆ ಅನಿವಾರ್ಯವಾಗಿ ನ್ಯಾಯಾಲಯದ ಮೆಟ್ಟಿಲು ಏರಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ.

ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ. 49, ಪರಿಸರ ಭವನ, ಚರ್ಚ್‌ಸ್ಟ್ರೀಟ್, ಬೆಂಗಳೂರು ಈ ಸ್ಥಳಗಳಲ್ಲಿ ಇಡಲಾಗಿತ್ತು.

ದಿನಾಂಕ: 12/04/2022 ರಂದು ಬೆಳಿಗ್ಗೆ 11:30 ಗಂಟೆಗೆ ಹಾವೇರಿ ಜಿಲ್ಲೆ, ರಾಣೇಬೆನ್ನೂರು ತಾಲ್ಲೂಕಿನ ಬೇಲೂರು ಗ್ರಾಮದ ಉದ್ದೇಶಿತ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲಾಯಿತು. ಡಾ: ಸುಧಾ ಸೌಮ್ಯಲತ ಎಂ. ಕೆ, ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ ಹಾವೇರಿ ಇವರು ಶ್ರೀ ಎಸ್. ಬಿ. ಶೆಟ್ಟೆಣ್ಣವರ, ಭಾ.ಆ.ಸೇ. ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ, ಶ್ರೀ ರಾಜಶೇಖರ ಪುರಾಣಿಕ, ಹಿರಿಯ ಪರಿಸರ ಅಧಿಕಾರಿಗಳು (ಪ್ರಭಾರ), ಧಾರವಾಡ, ಶ್ರೀ ಎಸ್. ಬಿ. ಉಳ್ಳೇಗಡ್ಡಿ, ಉಪ ವಿಭಾಗಾಧಿಕಾರಿಗಳು, ಹಾವೇರಿ ಉಪ ವಿಭಾಗ, ಶ್ರೀ ಶಂಕರ ಜಿ. ಎಸ್, ತಹಶೀಲ್ದಾರರು, ರಾಣೇಬೆನ್ನೂರು ತಾಲ್ಲೂಕು, ಶ್ರೀ ಕೊದಂಡರಾಮ ವ್ಹಿ. ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಹಾವೇರಿ ಹಾಗೂ ಇತರೆ ಇಲಾಖೆಯ ಅಧಿಕಾರಿಗಳು, ಯೋಜನೆಯ ಪ್ರತಿನಿಧಿಗಳು ಹಾಗೂ ಸ್ಥಳದಲ್ಲಿ ಹಾಜರಿದ್ದ ಎಲ್ಲಾ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು.

ಡಾ: ಸುಧಾ ಸೌಮ್ಯಲತ ಎಂ. ಕೆ, ಪರಿಸರ ಅಧಿಕಾರಿಗಳು, ಕ.ರಾ.ಮಾ.ನಿ. ಮಂಡಳಿ, ಹಾವೇರಿ ಇವರು ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಇವರ ಪರಿಸರ ಆಘಾತ ಅಧಿಸೂಚನೆ, 2006ರನ್ವಯ, ಸದರಿ ಪರಿಸರ ಸಾರ್ವಜನಿಕ ಸಭೆ ನಡೆಸಲು ತೆಗೆದುಕೊಂಡ ಕ್ರಮಗಳನ್ನು ವಿವರಿಸಿದರು ಮತ್ತು ಉದ್ದೇಶಿತ ಪ್ರಸ್ತಾವನೆಯು ಪರಿಸರ ಆಘಾತ ಅಧಿಸೂಚನೆ, 2006 ಮತ್ತು ತಿದ್ದುಪಡಿಯ ವ್ಯಾಪ್ತಿಯಲ್ಲಿ ಸೇರಿರುವುದರಿಂದ, ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಬೇಕಾಗಿರುವ ಕುರಿತು ನೆರೆದಿದ್ದ ಸಾರ್ವಜನಿಕರಿಗೆ ಸಭೆಯ ಉದ್ದೇಶವನ್ನು ವಿವರಿಸಿ, ಸಭೆಯ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳಿಗೆ ಸದರಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಿಕೊಡಬೇಕೆಂದು ಕೋರಿದರು. ಅದರಂತೆ, ಶ್ರೀ ಎಸ್. ಬಿ. ಶೆಟ್ಟೆಣ್ಣವರ, ಭಾ.ಆ.ಸೇ. ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ ಇವರು ಸಭೆಯ ಮಹತ್ವವನ್ನು ತಿಳಿಸುತ್ತಾ, ಮೆ. ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರ ಪ್ರತಿನಿಧಿಯವರಿಗೆ ಯೋಜನೆಯ ಬಗ್ಗೆ ಪ್ರಸ್ತಾವನೆಯನ್ನು ಮಂಡಿಸಲು ನಿರ್ದೇಶಿಸಿದರು ಮತ್ತು ಯೋಜನೆಯ ಬಗ್ಗೆ ಅಭಿಪ್ರಾಯಗಳು, ಆಕ್ಷೇಪಗಳು ಇದ್ದಲ್ಲಿ ಯೋಜನೆಯ ಪ್ರತಿನಿಧಿಗಳು ಉದ್ದೇಶಿತ ಯೋಜನೆಯನ್ನು ಪ್ರಸ್ತುತಪಡಿಸಿದ ನಂತರ ತಿಳಿಸಲು ಸಾರ್ವಜನಿಕರಿಗೆ ಸೂಚಿಸಿದರು.

ಮೆ. ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರ ಪರವಾಗಿ ಮೆ॥ ಹೊರೈಜನ್ ವೆಂಚರ್ಸ್‌ನ ಶ್ರೀ ಸಚಿನ್ ಎಂ.ಯು. ಇವರು, ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರ ಪರವಾಗಿ ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರು ಬೇಲೂರು ಮರಳು ಬ್ಲಾಕ್ (Block No.5) ರಲ್ಲಿ ಸಾಮಾನ್ಯ ಮರಳುಗಣಿಗಾರಿಕೆ ಮಾಡಲು ತುಂಗಭದ್ರಾ ನದಿ ಪಕ್ಕದ ಸ.ನಂ. 145 (P), 148, 149, 151 ಮತ್ತು 152 (P) ಬೇಲೂರು ಗ್ರಾಮ, ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆಯಲ್ಲಿ ಒಟ್ಟು 12.26 ಎಕರೆ (4.96 ಹೆಕ್ಟೇರ್) ಪ್ರದೇಶದಲ್ಲಿ, ವರ್ಷಕ್ಕೆ 60,890 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಉದ್ದೇಶಿತ ಮರಳು ಗಣಿಗಾರಿಕೆಯನ್ನು ಅರೆ-ಯಾಂತ್ರಿಕೃತ ಪದ್ಧತಿಯ ವಿಧಾನದಲ್ಲಿ ಮಾಡಲಾಗುವುದು. ಹಿಟಾಚಿ ಮತ್ತು ಜೆಸಿಬಿಯನ್ನು ಅಗೆಯಲು ಮತ್ತು ಲೋಡ್ ಮಾಡುವ ಚಟುವಟಿಕೆಗಳಿಗೆ ಬಳಸಲಾಗುವುದೆಂದು ಸಭೆಗೆ ತಿಳಿಸಿದರು. ಸದರಿ ಯೋಜನೆ ಕುರಿತಾದ ಪ್ರಮುಖ ಅಂಶಗಳು, ಯೋಜನೆಯಿಂದ ಸುತ್ತಲಿನ ಪರಿಸರಕ್ಕೆ ಆಗಬಹುದಾದ ಪರಿಣಾಮ, ಪರಿಸರ ನಿರ್ವಹಣೆ, ಮಾಲಿನ್ಯ ನಿಯಂತ್ರಣಕ್ಕೆ ತೆಗೆದುಕೊಳ್ಳಲಾಗುವ ಕ್ರಮಗಳು, ಸಿಎಸ್‌ಆರ್ ಚಟುವಟಿಕೆಗಳ ಕುರಿತು ಸಭೆಗೆ ವಿವರಿಸಿದರು. ಸಭೆಯಲ್ಲಿ ಪ್ರಸ್ತುತ ಪಡಿಸಲಾದ ಪ್ರಸ್ತಾವನೆಯ ಪ್ರತಿಯನ್ನು ಅನುಬಂಧ-6ರಲ್ಲಿ ಲಗತ್ತಿಸಿದೆ.

ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ, ಭಾರತ ಸರ್ಕಾರ ಇವರು ದಿನಾಂಕ: 14.09.2006 (ತಿದ್ದುಪಡಿ ದಿನಾಂಕ: 01.12.2009) ರಂದು ಹೊರಡಿಸಿರುವ ಪರಿಸರ ಆಘಾತ ಅಂದಾಜೀಕರಣ ಅಧಿಸೂಚನೆ ಮತ್ತು ಇತರೆ ತಿದ್ದುಪಡಿ ಪ್ರಕಾರ, ಸದರಿ ಯೋಜನೆಗೆ ರಾಜ್ಯ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ (SEIAA), ಕರ್ನಾಟಕದಿಂದ ಪರಿಸರ ವಿಮೋಚನ ಪತ್ರ ಪಡೆಯುವ ಪೂರ್ವದಲ್ಲಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ. ಅದರಂತೆ, ರಾಜ್ಯ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಇವರು ಸದರಿ ಯೋಜನೆಗೆ Terms of References (ಟಿ.ಓ.ಅರ್) ಅನ್ನು ಪತ್ರ ಸಂಖ್ಯೆ: SEIAA 338 MIN 2021 ದಿನಾಂಕ: 13/10/2021ರಂದು ನೀಡಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆ ನಡೆಸಲು ಕೋರುವಂತೆ ಯೋಜನಾದಾರರಿಗೆ ತಿಳಿಸಿರುತ್ತಾರೆ. ಅದರಂತೆ ಈ ಯೋಜನೆಗೆ 'ಕರಡು ಪರಿಸರ ಆಘಾತ ಅಂದಾಜೀಕರಣ ವರದಿಯನ್ನು' ಹಾಗೂ ಇದರ ಕನ್ನಡ ಮತ್ತು ಇಂಗ್ಲೀಷ್ ಅವತರಣಿಕೆಯ ಸಂಕ್ಷಿಪ್ತ ವರದಿಯನ್ನು ಮಂಡಳಿಗೆ ಸಲ್ಲಿಸಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ದಿನಾಂಕ: 10/01/2022 ರಂದು ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಯೋಜನೆಗೆ ಸಂಬಂಧಪಟ್ಟಂತೆ ಪರಿಸರ ಸಾರ್ವಜನಿಕ ಸಭೆಯನ್ನು ಉದ್ದೇಶಿತ ಯೋಜನಾ ಸ್ಥಳದಲ್ಲಿ ದಿನಾಂಕ: 12/04/2022ರಂದು ಪೂರ್ವಾಹ್ನ 11:30 ಗಂಟೆಗೆ ನಿಗದಿಪಡಿಸಲಾಗಿದ್ದು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು, ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಇಂಗ್ಲೀಷ್ ಪತ್ರಿಕೆಯಾದ **"ದಿ ಟೈಮ್ಸ್ ಆಫ್ ಇಂಡಿಯಾ"** ಮತ್ತು ಕನ್ನಡ ಪತ್ರಿಕೆಯಾದ **"ಕನ್ನಡಪ್ರಭ"** ದಿನ ಪತ್ರಿಕೆಗಳಲ್ಲಿ ದಿನಾಂಕ: 12/03/2022 ರಂದು ನೀಡಲಾಗಿರುತ್ತದೆ. ಅಲ್ಲದೇ ಸ್ಥಳೀಯರ ಮಾಹಿತಿಗಾಗಿ ಸ್ಥಳೀಯ ಕನ್ನಡ ದಿನ ಪತ್ರಿಕೆಯಾದ **"ಕೌರವ" ದಿನಪತ್ರಿಕೆಯಲ್ಲೂ** ಸಹ ದಿನಾಂಕ: 12/03/2022 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು.

ಪತ್ರಿಕಾ ಪ್ರಕಟಣೆಯಲ್ಲಿ, ಯೋಜನಾ ಸ್ಥಳದಲ್ಲಿ ವಾಸವಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆ, ಅಭಿಪ್ರಾಯ, ಟೀಕೆ–ಟಿಪ್ಪಣಿ ಹಾಗೂ ಅಹವಾಲುಗಳನ್ನು ಮೌಖಿಕವಾಗಿ/ಲಿಖಿತ/ ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಭೆ ಸಮಿತಿ (ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ) ಇವರಿಗೆ, ಅಧಿಸೂಚನೆ ಪ್ರಕಟವಾದ 30 ದಿನಗಳೊಳಗೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ಯೋಜನೆಯ ಪರಿಸರ ಆಘಾತ ಅಂದಾಜೀಕರಣ ವರದಿ ಹಾಗೂ ಕಾರ್ಯಕಾರಿ ಸಾರಾಂಶಗಳ ವರದಿಗಳನ್ನು ಸಾರ್ವಜನಿಕರ ಪರಾಮರ್ಶೆಗಾಗಿ ಜಿಲ್ಲಾಧಿಕಾರಿಗಳ ಕಛೇರಿ, ಹಾವೇರಿ ಜಿಲ್ಲೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಹಾವೇರಿ ಜಿಲ್ಲೆ, ಜಿಲ್ಲಾ ಕೈಗಾರಿಕಾ ಕೇಂದ್ರ, ಹಾವೇರಿ ಜಿಲ್ಲೆ, ತಾಲ್ಲೂಕು ಪಂಚಾಯತಿ, ರಾಣೇಬೆನ್ನೂರು, ಗ್ರಾಮ ಪಂಚಾಯತಿ ಕಾರ್ಯಾಲಯ, ಬೇಲೂರು, ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಹಾವೇರಿ, ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವ ಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ, ಕೊಠಡಿ ಸಂಖ್ಯೆ: 706, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು ಹಾಗೂ ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ

(5) ಶ್ರೀ ಡಿ ಟಿ ಹೊಸಮನಿ, ಬೇಲೂರು ಗ್ರಾಮ

ಇವರು ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಯುವ ಸಂದರ್ಭದಲ್ಲಿ ಪತ್ರದ ಮೂಲಕ ತಮ್ಮ ಅಹವಾಲನ್ನು ಸಲ್ಲಿಸಿದ್ದು ನಮ್ಮ ಗ್ರಾಮದ ಸುತ್ತಮುತ್ತ ಅಪಾರ ಮರಳು ಸಂಪತ್ತು ಇದೆ ಆದರೆ ಸುಮಾರು ವರ್ಷಗಳಿಂದ ಅನಧಿಕೃತವಾಗಿ ಮರಳು ಸಾಗಾಣಿಕೆ ಆಗುತ್ತಿದ್ದು ಇದರಿಂದ ಸರ್ಕಾರಕ್ಕೆ ಬರುವ ನೂರಾರು ಕೋಟಿ ರಾಜಧನ ನಷ್ಟವಾಗಿದೆ ಮತ್ತು ಪರಿಸರ ಹಾಳಾಗಿದೆ. ಆದ ಕಾರಣ ಪರಿಸರ ಹಾಳಾಗದಂತೆ ಸರ್ಕಾರದ ಕಾನೂನಿಗೆ ಒಳಪಟ್ಟು ಗಣಿಗಾರಿಕೆ ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸಿರುತ್ತಾರೆ.

(6) ಶ್ರೀ ಕೆಂಚಪ್ಪ ಚಲವಾದಿ, ಅಧ್ಯಕ್ಷರು, ಕಾರ್ಮಿಕ ಸಂಘ, ಬೇಲೂರು ಗ್ರಾಮ

ಇವರು ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಯುವ ಸಂದರ್ಭದಲ್ಲಿ ಪತ್ರದ ಮೂಲಕ ತಮ್ಮ ಅಹವಾಲನ್ನು ಸಲ್ಲಿಸಿದ್ದು ನಮ್ಮ ಗ್ರಾಮದ ಸುತ್ತಮುತ್ತ ಅಪಾರ ಮರಳು ಸಂಪತ್ತು ಇದೆ ಆದರೆ ಸುಮಾರು ವರ್ಷಗಳಿಂದ ಅನಧಿಕೃತವಾಗಿ ಮರಳು ಸಾಗಾಣಿಕೆ ಆಗುತ್ತಿದ್ದು ಇದರಿಂದ ಸರ್ಕಾರಕ್ಕೆ ಬರುವ ನೂರಾರು ಕೋಟಿ ರಾಜಧನ ನಷ್ಟವಾಗಿದೆ ಮತ್ತು ಪರಿಸರ ಹಾಳಾಗಿದೆ. ಹೊಸ ಮರಳು ನೀತಿ ಪ್ರಕಾರ ನಮ್ಮ ಕಾರ್ಮಿಕ ಸಂಘಕ್ಕೆ ಮಾನ್ಯತೆ ಕೊಟ್ಟು ಮರಳು ತುಂಬುವ ಹಕ್ಕನ್ನು ನಮಗೆ ಕೊಡಬೇಕು ಎಂದು ಮನವಿ ಸಲ್ಲಿಸಿರುತ್ತಾರೆ.

ಮಾನ್ಯ ಜಿಲ್ಲಾಧಿಕಾರಿಗಳು ಇಲ್ಲಿ ಎರಡು ಬ್ಲಾಕ್‌ಗಳು ಇದೆ, ಇಲ್ಲಿ ಎರಡು ಬ್ಲಾಕ್‌ಗಳೂ ಪ್ರತ್ಯೇಕವಾಗಿದ್ದು ಎರಡೂ ಬ್ಲಾಕ್‌ಗಳನ್ನೂ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯವರಿಗೆ ಕೊಟ್ಟಿರುತ್ತೇವೆ, ಎರಡೂ ಬ್ಲಾಕ್‌ಗಳೂ ಒಂದಕ್ಕೊಂದು ತಾಗಿಕೊಂಡು ಪಕ್ಕದಲ್ಲಿಯೇ ಇರುತ್ತವೆ ಈ ತರಹದ ಪ್ರೆಜೆಂಟೇಶನ್ ಮತ್ತೊಂದು ಬ್ಲಾಕ್‌ಗೆ ಪುನಃ ಮಾಡುವ ಅವಶ್ಯಕತೆ ಇರುವುದಿಲ್ಲ, ಇದೇ ರೀತಿ ಇನ್ನೊಂದು ಬ್ಲಾಕ್‌ಗೆ ಅನ್ವಯವಾಗುತ್ತದೆ ಇನ್ಯಾರಾದರೂ ಮಾತನಾಡುವವರಿದ್ದರೆ ಮತ್ತು ಅರ್ಜಿ ಅಹವಾಲುಗಳಿದ್ದರೆ ಹೇಳಬಹುದು ಸಾಧ್ಯವಾದಷ್ಟು ರೈತರು ಸಮಸ್ಯೆಗಳನ್ನು ಹೇಳಿದ್ದಾರೆ ಇಲ್ಲಿ ಮರಳನ್ನು ಸರ್ಕಾರದವರೇ ಕೊಡುವುದರಿಂದ ಜನರಿಗೆ ಕಡಿಮೆ ದರದಲ್ಲಿ ಸಿಗುತ್ತದೆ ಮತ್ತು ಸಮಯಕ್ಕೆ ಸರಿಯಾಗಿ ಸಿಗುತ್ತದೆ ಬಹಳಷ್ಟು ನಮಗೂ ಕೂಡ ಪತ್ರಗಳು ಬಂದಿವೆ. ಏನಾದರೂ ಮಾಡಿ ಮರಳು ಸಿಗುವ ಹಾಗೆ ಮಾಡಿ ಬಹಳ ಕಷ್ಟ ಇದೆ, ಬೇಕಾದ ಬೆಲೆಗೆ ಸಿಗುತ್ತಾ ಇಲ್ಲ, ಸಿಕ್ಕಾಪಟ್ಟೆ ದರ ಕೇಳುತ್ತಾರೆ. ಆದ್ದರಿಂದ ಸಾರ್ವಜನಿಕರಿಗೆ ಅನುಕೂಲವಾಗುವ ಹಾಗೆ ಮಾಡಿ ಎಂದು ಸಾರ್ವಜನಿಕರು ಹೇಳುತ್ತಾರೆ. ಸಭೆಯಲ್ಲಿದ್ದ ಗ್ರಾಮ ಪಂಚಾಯಿತಿಯ ಪಿಡಿಓ ಅವರಿಗೆ ಇದು ನಿಮ್ಮ ಪಂಚಾಯಿತಿಯ ಬ್ಲಾಕ್ ಆಗಿರುತ್ತದೆ, ಅದಕ್ಕಾಗಿ ಗಮನ ಇರಲಿ ಇಲ್ಲಿ ಯಾವುದೇ ರೀತಿಯ ಕಾನೂನು ಬಾಹಿರ ಚಟುವಟಿಕೆ ಮಾಡಲಿಕ್ಕೆ ಹೋಗಬೇಡಿ, ಏನಾದರೂ ಇದ್ದರೆ ತಕ್ಷಣದಲ್ಲಿಯೇ ಸ್ಪಂದಿಸಬೇಕು. ಇಲ್ಲಿಯ ರಸ್ತೆಯು ಪಂಚಾಯಿತಿಯ ವ್ಯಾಪ್ತಿಗೆ ಬರುತ್ತದೆಯೋ ಎಂದು ಕೇಳಿದರು. ಅದಕ್ಕೆ ಪಂಚಾಯಿತಿಯವರು ಅದು ಮಾಲ್ಕಿ (ಮಾಲಿಕತ್ವದ) ಜಾಗ ಇರುತ್ತದೆ ಎಂದು ಜಿಲ್ಲಾಧಿಕಾರಿಗಳಿಗೆ ತಿಳಿಸಿದರು. ಆಗ ಜಿಲ್ಲಾಧಿಕಾರಿಗಳು ರಸ್ತೆ ಮಾಡುವುದರಿಂದ ಮರಳು ಗಣಿಗಾರಿಕೆಗೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ ಎಂದು ಹೇಳಿದರು. ಆಗ ಸಭೆಯಲ್ಲಿದ್ದವರು ಸ್ಟಾಕ್ ಯಾರ್ಡ್ ಎಲ್ಲಿ ಮಾಡುವುದು ಎಂದು ಕೇಳಿದರು ಅದಕ್ಕೆ ಯೋಜನಾ ಪ್ರತಿನಿಧಿಗಳು ಇದೇ ಊರಿನ ಸರ್ಕಾರಿ ಜಾಗದಲ್ಲಿ ಮಾಡುತ್ತೇವೆ ಎಂದು ತಿಳಿಸಿದರು. ಮತ್ತು ಶ್ರೀ ಸಿದ್ದಪ್ಪ ಕುದರಿಹಾಳ ಅವರು ಮತ್ತೊಮ್ಮೆ ಮಾತನಾಡಿ ನದಿಯಲ್ಲಿ ಮುಳುಗಿ ಮರಳು ಗಣಿಗಾರಿಕೆ ಮಾಡಲು ಬೇರೆ ಜಿಲ್ಲೆಗಳಲ್ಲಿ ಅನುಮತಿ ನೀಡಿರುತ್ತಾರೆ ಆದ್ದರಿಂದ ನಮ್ಮ ಜಿಲ್ಲೆಯಲ್ಲೂ ಇದಕ್ಕೆ ಅನುಮತಿ ನೀಡಬೇಕೆಂದು ವಿನಂತಿಸಿದರು. ಮುಂದುವರೆದು, ಜಿಲ್ಲಾಧಿಕಾರಿಗಳು ಸ್ಟಾಕ್ ಯಾರ್ಡ್ ಎಲ್ಲಿ ನಿರ್ಮಾಣ ಮಾಡುತ್ತೀರಿ

ಎಂದು ಹಟ್ಟಿ ಗೋಲ್ಡ ಮೈನ್ಸ್ ಕಂಪನಿಯವರಿಗೆ ಕೇಳಿದರು ಅದಕ್ಕೆ ಗ್ರಾಮದ ಸರ್ಕಾರಿ ಜಮೀನನ್ನು ಗುರುತಿಸಲಾಗಿರುತ್ತದೆ ಎಂದು ತಿಳಿಸಿದರು. ನಂತರದಲ್ಲಿ ಕಂಪನಿಯವರು ಸಭೆಯವರನ್ನುದ್ದೇಶಿಸಿ ತಾವು ತಮ್ಮ ತಮ್ಮ ಅಹವಾಲುಗಳನ್ನು ಸದರಿ ವಿಷಯದ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳಲ್ಲಿ ಮಂಡಿಸಿರುತ್ತೀರಿ. ಸದರಿ ಯೋಜನೆಯಲ್ಲಿ ರಸ್ತೆ ಸಂಪರ್ಕದ ವಿಷಯವು ಮೊದಲನೇ ವಿಷಯವಾಗಿದ್ದು ಇಷ್ಟು ದಿನಗಳ ವರೆಗೆ ರಸ್ತೆ ಹಾಳಾಗಿದ್ದು ರಸ್ತೆಯ ಮೇಲೆ ಧೂಳು ಕೂತಿರುತ್ತದೆ. ಆದರೆ ಈಗ ಇದು ಸರ್ಕಾರದ ಯೋಜನೆ ಆಗಿದ್ದು ನೂತನ ಮರಳು ನೀತಿಯ ಮೂಲಕ ಹಲವಾರು ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗಿದೆ. ಧೂಳು ಬಾರದ ರೀತಿಯಲ್ಲಿ ರಸ್ತೆಗಳಿಗೆ ನೀರಿನ ಸಿಂಪರಣೆ ಮಾಡಿಕೊಂಡು ರೈತರಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ಗಮನದಲ್ಲಿಟ್ಟುಕೊಂಡು ಗಣಿಗಾರಿಕೆಯನ್ನು ಮಾಡುತ್ತೇವೆ. ಹಾಗೆ ಸ್ಟಾಕ್ ಯಾರ್ಡ್ ಬಗ್ಗೆ ಪ್ರಸ್ತಾಪಿಸಿದ್ದು ಈಗಾಗಲೇ ಒಂದು ಸರ್ಕಾರಿ ಜಾಗವನ್ನು ಗುರುತಿಸಿರುತ್ತೇವೆ ಮತ್ತು ಬೇಲೂರು ಗ್ರಾಮದಲ್ಲಿಯೇ ಸ್ಟಾಕ್ ಯಾರ್ಡ್ ನಿರ್ವಹಣೆ ಮಾಡುತ್ತೇವೆ, ಸ್ಟಾಕ್ ಯಾರ್ಡ್‌ಗಳಲ್ಲಿ ಕ್ಯಾಮರಾಗಳನ್ನು ಅಳವಡಿಸುತ್ತೇವೆ, ಯಾವುದೇ ರೀತಿಯ ಅಕ್ರಮ ಮರಳನ್ನು ಸಾಗಾಣಿಕೆ ಮಾಡದಂತೆ ಭದ್ರತಾ ಸಿಬ್ಬಂಧಿಯನ್ನು ನೇಮಿಸುತ್ತೇವೆ, ಕ್ಯಾಮರಾಗಳ ಮೂಲಕ ನಿರ್ವಹಣೆ ಮಾಡುತ್ತೇವೆ, ಸಾರ್ವಜನಿಕರಿಗೆ ಮರಳು ಬೇಕಾದಲ್ಲಿ ಮರಳು ಆಪ್ (App) ಮುಖಾಂತರ ಮರಳು ಬೇಕಾದ ಪ್ರಮಾಣದಲ್ಲಿ ಪೂರೈಸುತ್ತೇವೆ. ಸದರಿ ಯೋಜನೆಯಲ್ಲಿ ಒಂದು ನಿಗಧಿತ ದರವಿದ್ದು ಒಬ್ಬರಿಗೊಂದು ಒಬ್ಬರಿಗೊಂದು ದರ ಇರುವುದಿಲ್ಲ ಎಲ್ಲರಿಗೂ ಸರ್ಕಾರವು ನಿಗಧಿ ಪಡಿಸಿದಂತಹ ದರ ರೂ. 700/-ಕ್ಕೆ ಒಂದು ಟನ್ ಮರಳನ್ನು ಪೂರೈಸುತ್ತೇವೆ. ಇದರಿಂದ ಯಾರೂ ಆತಂಕಕ್ಕೆ ಒಳಗಾಗಬಾರದು ಎಂದು ಕಂಪನಿಯವರು ಸಭೆಗೆ ತಿಳಿಸಿದರು. ಆಗ ಸಭೆಯಲ್ಲಿದ್ದವರು ಗ್ರಾಮಸ್ಥರಿಗೆ ಕಡಿಮೆ ದರದಲ್ಲಿ ಮರಳನ್ನು ಪೂರೈಸುವಂತೆ ವಿನಂತಿಸಿದರು. ಆಗ ಮಾನ್ಯ ಜಿಲ್ಲಾಧಿಕಾರಿಗಳು ಸಾರ್ವಜನಿಕರಿಗೆ ನಿಮಗೆ ಮರಳಿನ ಅವಶ್ಯಕತೆ ಬಗ್ಗೆ ಪಂಚಾಯಿತಿವರಿಗೆ ಮನವಿ ಸಲ್ಲಿಸಿದಲ್ಲಿ ರಿಯಾಯಿತಿ ದರದಲ್ಲಿ ಮರಳು ಪೂರೈಸಲು ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದರು. ನಂತರ ಕಂಪನಿಯವರು ಗಣಿಗಾರಿಕೆ ಮಾಡಿ ರಾಜಧನವನ್ನು ಸರ್ಕಾರಕ್ಕೆ ಕಟ್ಟುತ್ತೇವೆ. ಈ ಹಣವನ್ನು ನೀವು ನೇರವಾಗಿ ಕೇಳಿ ಗ್ರಾಮದ ಅಭಿವೃದ್ಧಿ ಕಾರ್ಯಕ್ಕೆ ಬಳಸಬಹುದು ಎಂದು ತಿಳಿಸಿದರು. ನಾವೂ ಕೂಡ ಹಲವಾರು ಸಿ ಎಸ್ ಆರ್ ಚಟುವಟಿಕೆಗಳನ್ನು ಈ ಯೋಜನೆ ಮುಖಾಂತರ ಇಟ್ಟುಕೊಂಡಿದ್ದೇವೆ ಕುಡಿಯುವ ನೀರು, ದೇವಸ್ಥಾನ ನಿರ್ಮಾಣಕ್ಕೆ ಹಾಗೂ ಇದರ ಜೊತೆಗೆ ಪರಿಸರವನ್ನು ಕಾಪಾಡಿಕೊಳ್ಳಲು ಗಿಡಮರಗಳನ್ನು ನೆಡುವುದು ವಾತಾವರಣವನ್ನು ಉತ್ತಮ ಮಾಡಲು ಈ ಯೋಜನೆಯ ಜೊತೆಗೆ ಈ ಎಲ್ಲ ಕಾರ್ಯಕ್ರಮಗಳಿವೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾಧಿಕಾರಿಗಳು ಸಾರ್ವಜನಿಕರು ಹೇಳಿದ ಅಭಿಪ್ರಾಯಗಳನ್ನು ವೀಡಿಯೋ ರೆಕಾರ್ಡ್ ಮಾಡಿದ್ದು, ಹೇಳಿದ ಎಲ್ಲಾ ಆಕ್ಷೇಪಣೆಗಳನ್ನು ದಾಖಲಿಸಿ, ಸಭೆಯ ನಡಾವಳಿಯೊಂದಿಗೆ ವೀಡಿಯೋ ಸಿಡಿ, ಛಾಯಾ ಚಿತ್ರಗಳನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರ ಮುಖಾಂತರ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ರವಾನಿಸುವುದಾಗಿ ತಿಳಿಸಿದರು.

ಸಭೆಗೆ ಆಗಮಿಸಿದ್ದ ಎಲ್ಲರಿಗೂ ಶ್ರೀ ರಾಘವ, ಹಿರಿಯ ಅಭಿಯಂತರರು (ಪರಿಸರ), ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿ, ಇವರು ವಂದಿಸಿದರು. ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಎಸ್. ಬಿ. ಶೆಟ್ಟೆಣ್ಣವರ, ಭಾ.ಆ.ಸೇ.
ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,
ಪರಿಸರ ಸಾರ್ವಜನಿಕ ಸಭೆ, ಹಾವೇರಿ ಜಿಲ್ಲೆ